ಸಾಕ್ಷಿಯನ್ನು ದಿನಾಂಕ 30-08-2021 ರಂದು ಪುನಃ ಕರೆಯಿಸಿ ಪ್ರಮಾಣ ವಚನ ಬೋಧಿಸಲಾಯಿತು.

ಮುಂದುವರೆದ ಪಾಟೀ ಸವಾಲುಃ ಆರೋಪಿ ಪರವಾಗಿ ಶ್ರೀ ಎಸ್.ಎನ್.ಬಿ. ವಕೀಲರಿಂದಃ

ಜೀವನಾಂಶದ ಸಲುವಾಗಿ ನಾನು ಇದೇ ನ್ಯಾಯಾಲಯದಲ್ಲಿ ಆರೋಪಿ ವಿರುದ್ಧ Crl.Misc.31/2018 ರಲ್ಲಿ ಅರ್ಜಿ ಸಲ್ಲಿಸಿದ್ದೇನೆ ಎನ್ನುವುದು ಸರಿ. ಸದರಿ ಅರ್ಜಿಯನ್ನು ಸಲ್ಲಿಸಲು ನಾನೇ ನಮ್ಮ ವಕೀಲರಿಗೆ ಮಾಹಿತಿ ಕೊಟ್ಟಿದ್ದೆ. ಸದರಿ ಅರ್ಜಿಯಲ್ಲಿ ಆರೋಪಿ ಮತ್ತು ಆತನ ತಾಯಿ ದಿನಾಂಕ 11-10-2014 ರಂದು ನನ್ನ ಮೇಲೆ ಹಲ್ಲೆ ಮಾಡಿ ಮನೆಯಿಂದ ಹೊರಗೆ ಹಾಕಿರುತ್ತಾನೆಂದು ಬರೆಸಿರುತ್ತೇನೆ ಎನ್ನುವುದು ಸರಿ.

ಆರೋಪಿಗೆ ವಯಸ್ಸಾದ ತಾಯಿ ಇದ್ದಾಳೆ ಎನ್ನುವುದು ಸರಿ. ವಯಸ್ಸಾದ ತನ್ನ ತಾಯಿಯನ್ನು ಚೆನ್ನಾಗಿ ನೋಡಿಕೊ ಎಂದು ಆರೋಪಿ ನನಗೆ ಹೇಳಿದ ಒಂದೇ ಕಾರಣಕ್ಕೆ ನಾನು ಆತನ ವಿರುದ್ಧ ನಿಪಿ-3 ರಂತೆ ಸುಳ್ಳು ಕೇಸು ದಾಖಲಿಸಿದ್ದೇನೆ ಎನ್ನುವುದು ಸರಿಯಲ್ಲ.

ಕಳೆದ ಬಾರಿ ನಿಮ್ಮ ಪಾಟೀ ಸವಾಲಿನಲ್ಲಿ ನೀವು ಹೇಳಿದಂತೆ ನಿಮ್ಮ ಅಣ್ಣನ ಬಳಿ ನೀವು ದೂರು ಬರೆದುಕೊಡುವುದಕ್ಕೂ ಮೊದಲು ಆಸ್ಪತ್ರೆಗೆ ಪೋಲೀಸರು ನಿಮ್ಮನ್ನು ವಿಚಾರಣೆ ಮಾಡಲು ಬಂದಿದ್ದರೆ ಎಂಬ ಪ್ರಶ್ನೆಗೆ ಸಾಕ್ಷಿ ಪೋಲೀಸರು ಬಂದಿದ್ದರು ನಾನು ಅವರ ಮುಂದೆ ನಡೆದಿದ್ದ ವಿಚಾರವನ್ನು ಹೇಳಿದ್ದೆ ಆದರೆ ಬರವಣಿಗೆ ರೂಪದಲ್ಲಿ ಪೋಲೀಸರಿಗೆ ದೂರು ಕೊಟ್ಟಿರಲಿಲ್ಲ ಎನ್ನುತ್ತಾರೆ. ಪೋಲೀಸರಿಗೆ ಆಸ್ಪತ್ರೆಗೆ ಬಂದಿದ್ದಾಗ ರಾತ್ರಿ ಆಗಿತ್ತು. ನಿಖರವಾದ ಸಮಯ ನೆನಪಿಲ್ಲ. ಪೋಲೀಸರು ಆಸ್ಪತ್ರೆಗೆ ಬಂದು ಹೋದ ಮರುದಿನ ನಾನು ನನ್ನ ಅಣ್ಣನ ಬಳಿ ದೂರು ಬರೆದುಕೊಟ್ಟು ಕಳುಹಿಸಿದ್ದೆ. ನನ್ನ ಅಣ್ಣ ದೂರು ತೆಗೆದುಕೊಂಡು ಬೆಳಿಗ್ಗೆ 09-00 ಗಂಟೆಗೆ ಠಾಣೆಗೆ ಹೋಗಿದ್ದ. ಸದರಿ ದೂರನ್ನು ಸಂಜೆ ವೇಳೆಗೆ ಪಡೆದಿರುತ್ತಾರೆ.

ದೂರು ದಾಖಲಿಸಲು ತಡ ಆದ ಬಗ್ಗೆ ದೂರಿನಲ್ಲಿ ಯಾವುದೇ ಕಾರಣವನ್ನು ನಮೂದು ಮಾಡಿಲ್ಲ.

ನನ್ನ ಮದುವೆಯಾದ ನಂತರ ನಾನು ಒಂದು ವರ್ಷ ಆರೋಪಿಯೊಂದಿಗೆ ಸೇಡಂನಲ್ಲಿ ವಾಸವಿದ್ದೆ. ಸದರಿ ಒಂದು ವರ್ಷ ನಾವಿಬ್ಬರೂ ಅನ್ಯೋನ್ಯವಾಗಿದ್ದೆವು ಎಂದರೆ ಸರಿ. ಆಗ ನಮ್ಮಿಬ್ಬರ ನಡುವೆ ಯಾವುದೇ ಗಲಾಟೆ ಆಗಿಲ್ಲ ಎನ್ನುವುದು ಸರಿಯಲ್ಲ. ನಾನು ನನ್ನ ಅತ್ತೆಯೊಂದಿಗೆ ಜಗಳವಾಡುತ್ತಿದ್ದುದರಿಂದ ಆರೋಪಿ ನನ್ನನ್ನು ಸೇಡಂನಲ್ಲಿ ಮನೆ ಮಾಡಿ ಇರಿಸಿ ಮತ್ತು ಆತನ ತಾಯಿಯನ್ನು ರುದ್ನೂರಿನ ಮನೆಯಲ್ಲಿಟ್ಟುಕೊಂಡು ಇಬ್ಬರನ್ನೂ ನೋಡಿಕೊಳ್ಳುತ್ತಿದ್ದ ಎನ್ನುವುದು ಸುಳ್ಳು

ದಿನಾಂಕ 18-05-2017 ರಂದು ಆರೋಪಿ ನನಗೆ ಹೊಡೆ ಬಡಿ ಮಾಡಿ ಮನೆಯಿಂದ ಹೊರಗೆ ಹಾಕಿದ ಬಗ್ಗೆ ನಾನು ಪೋಲೀಸರಿಗೆ ದೂರು ಕೊಟ್ಟಿಲ್ಲ. ಆ ಸಂದರ್ಭದಲ್ಲಿ ನಾನು ಆಸ್ಪತ್ರೆಗೆ ದಾಖಲಾಗಿರಲಿಲ್ಲ. ಗಲಾಟೆಯಾದ ನಂತರ ರಾಜೀ ಪಂಚಾಯತಿ ಮಾಡಲು ನನ್ನ ತಂದೆ ತಾಯಿ, ಹಾಗೂ ಊರಿನವರಾದ ಸಂತೋಷರೆಡ್ಡಿ, ನಾರಾಯಣರೆಡ್ಡಿ ಎಂಬುವವರು ಬಂದಿದ್ದರು.

ನನ್ನ ಅಣ್ಣನ ಬಳಿ ದೂರು ಕಳುಹಿಸಿಕೊಟ್ಟದ್ದನ್ನು ಹೊರತುಪಡಿಸಿ ನಾನು ಈ ಪ್ರಕರಣದ ಸಂಬಂಧ ಠಾಣೆಗೆ ಹೋಗಿಲ್ಲ ಎನ್ನುವುದು ಸರಿ. ಠಾಣೆಗೆ ಹೋಗಿ ನಾನು ಯಾವುದೇ ಹೇಳಿಕೆ ಕೊಟ್ಟಿಲ್ಲ ಎನ್ನುವುದು ಸರಿ.

ಹಲ್ಲೆ ಪ್ರಕರಣದಲ್ಲಿ ಗಾಯಗೊಂಡು ಆಸ್ಪತ್ರೆಗೆ ದಾಖಲಾದಾಗ ಹಲ್ಲೆ ಆದ ಬಗ್ಗೆ ವೈದ್ಯರಿಗೆ ಹೇಳಿಕೆ ಕೊಡಬೇಕಾಗುತ್ತದೆ ಎನ್ನುವುದು ನನಗೆ ಗೊತ್ತಿಲ್ಲ. ವೈದ್ಯರ ಸಮಕ್ಷಮ ಹೇಳಿಕೆ ಕೊಡಬೇಕಾಗುತ್ತದೆ ಎನ್ನುವುದು ನನಗೆ ಗೊತ್ತಿಲ್ಲ.

ನಿಪಿ-3 ರ ದೂರಿನಲ್ಲಿ ಅದನ್ನು ನಾನು ನನ್ನ ಅಣ್ಣನ ಅಣ್ಣನ ಬಳಿ ಕೊಟ್ಟು ಠಾಣೆಗೆ ಕಳುಹಿಸಿದ್ದೇನೆ ಎಂದು ನಮೂದು ಮಾಡಿಲ್ಲ ಎನ್ನುವುದು ಸರಿ. ಪೋಲೀಸರ ಮುಂದೆ ನನ್ನ ಅಣ್ಣ ಚಾಸಾ-14 ನಾನು ಆರೋಪಿ ಮನೆಯಲ್ಲಿ ಆತ್ಮ ಹತ್ಯೆಗೆ ಪ್ರಯತ್ನಪಟ್ಟಿದ್ದೆ ಎಂದು ಹೇಳಿದ್ದಾನೆ ಎಂದು ಸೂಚಿಸಿದರೆ ಸಾಕ್ಷಿ ಪೋಲೀಸರು ಆ ರೀತಿ ನನ್ನ ಅಣ್ಣನ ಹೇಳಿಕೆಯನ್ನೆ ಪಡೆದಿಲ್ಲ ಮತ್ತು ನನ್ನ ಅಣ್ಣ ನೀವು ಹೇಳುವ ರೀತಿ ಹೇಳಿಕೆ ನೀಡಿಲ್ಲ ಎನ್ನುತ್ತಾರೆ. ಪೋಲೀಸರು ಯಾರ ಹೇಳಿಕೆಯನ್ನು ಪಡೆದರು ಎನ್ನುವುದು ನನಗೆ ಗೊತ್ತಿಲ್ಲ.

ಕೃತ್ಯ ನಡೆದ ಸ್ಥಳಕ್ಕೆ ಪೋಲೀಸರು ಬಂದು ಏನನ್ನಾದರೂ ಜಪ್ತು ಮಾಡಿದ್ದರೇ ಎಂಬ ಪ್ರಶ್ನೆಗೆ ಹೌದು ಪೋಲೀಸರು ಘಟನಾ ಸ್ಥಳಕ್ಕೆ ಹೋಗಿದ್ದರು ಆದರೆ ಆಗ ನಾನು ಹಾಜರಿರಲಿಲ್ಲ ನನ್ನ ಅಣ್ಣ ಹೋಗಿದ್ದ ಮತ್ತು ಪೋಲೀಸರು ಏನನ್ನು ಜಪ್ತು ಮಾಡಿಲ್ಲ ಎನ್ನುತ್ತಾರೆ.

ಆರೋಪಿ ಕಿರುಕುಳ ಕೊಟ್ಟ 9 ತಿಂಗಳ ನಂತರ ತಡವಾಗಿ ದೂರು ಕೊಡಲು ಕಾರಣವೇನು ಎಂಬ ಪ್ರಶ್ನೆಗೆ ಸಾಕ್ಷಿ ಆರೋಪಿ ಇಂದಲ್ಲಾ ನಾಳೆ ಸರಿ ಹೋಗಬಹುದು ಎಂದು ದೂರು ಕೊಟ್ಟಿರಲಿಲ್ಲ ಎನ್ನುತ್ತಾರೆ. ಆರೋಪಿತರು ನನಗೆ ಯಾವುದೇ ರೀತಿಯ ಕಿರುಕುಳ ಕೊಟ್ಟಿಲ್ಲದಿದ್ದರಿಂದ ಅವರ ವಿರುದ್ಧ ನಾನು ಯಾವುದೇ ದೂರು ಕೊಟ್ಟಿರಲಿಲ್ಲ ಎನ್ನುವುದು ಸರಿಯಲ್ಲ.

ಆರೋಪಿ ನನ್ನಷ್ಟು ತಿಳುವಳಿಕ ಉಳ್ಳವನಲ್ಲ ಎಂಬ ಕಾರಣಕ್ಕೆ ಆತನ ವಿರುದ್ಧ ಸುಳ್ಳು ದೂರು ಕೊಟ್ಟಿದ್ದೇನೆ ಎನ್ನುವುದು ಸರಿಯಲ್ಲ.

ನನ್ನ ಮುಖ್ಯ ವಿಚಾರಣೆಯಲ್ಲಿ ಹೇಳಿರುವುದೆಲ್ಲ ಸುಳ್ಳು ಎನ್ನುವುದು ಸರಿಯಲ್ಲ. ಆರೋಪಿ ವಿರುದ್ಧ ಸುಳ್ಳು ದೂರು ಸಲ್ಲಿಸಿ ಈಗ ಸುಳ್ಳು ಸಾಕ್ಷ್ಯ ಹೇಳುತ್ತಿದ್ದೇನೆಂದರೆ ಸರಿಯಲ್ಲ.

ಮರುವಿಚಾರಣೆಃ ಇಲ್ಲಾ

(ಮುಕ್ತ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಬೆರಳಚ್ಚು ಮಾಡಿಸಲಾಯಿತು)

ಓ.ಹೇ.ಕೇ. ಸರಿ ಇದೆ.

ಹೆಚ್ಚುವರಿ ಸಿವಿಲ್ ನ್ಯಾಯಾಧೀಶರು,
ಚಿಂಚೋಳಿ